


# 2019–20ರ ಸಾಲಿನ ಬಿಬಿಎಂಪಿ ಬಜೆಟ್‌ಗೆ ಪ್ರಸ್ತಾವನೆ

*ಶ್ರೀಮತಿ ಎಸ್.ಪಿ.ಹೇಮಲತಾ, ಅಧ್ಯಕ್ಷರು, ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಇವರಿಗೆ ಸಲ್ಲಿಸಲಾಗಿದೆ*

ಫೆಬ್ರವರಿ 11, 2019

ಬೆಂಗಳೂರು ಪೊಲಿಟಿಕಲ್ ಆಕ್ಷನ್ ಕಮಿಟಿ
#4/6, ನೆಲಮಹಡಿ, ಹೈಗ್ರೌಂಡ್ಸ್, ಮಿಲ್ಲರ್ಸ್ ರಸ್ತೆ, ವಿಕ್ರಮ್ ಆಸ್ಪತ್ರೆ ಎದುರು, ಬೆಂಗಳೂರು – 560052

## ಬಿ.ಪ್ಯಾಕ್ ಬಗ್ಗೆ

ಬೆಂಗಳೂರು ಪೊಲಿಟಿಕಲ್ ಆಕ್ಷನ್ ಕಮಿಟಿಯು (ಬಿ.ಪ್ಯಾಕ್) ಒಂದು ಪಕ್ಷಾತೀತ, 'ಲಾಭಕ್ಕಾಗಿ ಅಲ್ಲದ' ಟ್ರಸ್ಟ್ ಆಗಿದ್ದು, ಬೆಂಗಳೂರಿನಲ್ಲಿ ಆಡಳಿತವನ್ನು ಸುಧಾರಿಸುವ ಮತ್ತು ಪ್ರತಿಯೊಬ್ಬ ನಾಗರಿಕರ ಜೀವನ ಮಟ್ಟವನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ. ಬಿ.ಪ್ಯಾಕ್ ನಿರ್ದಿಷ್ಟವಾಗಿ ಲಕ್ಷ್ಯ ವಹಿಸಿರುವುದೇನೆಂದರೆ ಆಡಳಿತದ ಎಲ್ಲಾ ಸ್ತರಗಳಲ್ಲಿ ಉತ್ತಮ ಆಡಳಿತ ಪದ್ಧತಿಗಳು, ಪ್ರಾಮಾಣಿಕತೆ ಮತ್ತು ಪಾರದರ್ಶಕತೆ, ನಗರದಲ್ಲಿ ಮೂಲಭೂತ ಸೌಕರ್ಯಗಳ ಮಟ್ಟವನ್ನು ಉತ್ತಮಪಡಿಸುವುದು, ಬೆಂಗಳೂರು ನಗರದಲ್ಲಿ ಸಾರ್ವಜನಿಕ ಕಚೇರಿಗಳಿಗಾಗಿ ಉತ್ತಮ ಅಭ್ಯರ್ಥಿಗಳನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು ಮತ್ತು ಬಿ.ಪ್ಯಾಕ್‌ನ ಚಾರ್ಟರ್‌ನಲ್ಲಿ ಪ್ರಮುಖವಾಗಿ ಉಲ್ಲೇಖಿಸಲಾಗಿರುವಂತೆ ಬೆಂಗಳೂರಿನ ಎಲ್ಲಾ ನಾಗರಿಕರಿಗೆ ಕಾನೂನಿನ ನಿಯಮಗಳನ್ನು ಖಚಿತಪಡಿಸುವುದರ ಮೂಲಕ ಸುರಕ್ಷಿತ ನಗರವನ್ನಾಗಿಸುವುದು.

**2018–19ರ ಬಜೆಟ್‌ನ ಪ್ರಮುಖಾಂಶಗಳು**

| | | 2015–16ನೇ ಸಾಲು | 2016–17ರ ಸಾಲು | 2017–18ರ ಸಾಲು (RE) | 2018–19ರ ಸಾಲು (BE) |
|---|---|---|---|---|---|
| | (ಕೋಟಿ ರೂಪಾಯಿಗಳಲ್ಲಿ) | | | | |
| 1 | ಆಸ್ತಿ ತೆರಿಗೆ | 14.3 | 1725 | 1777 | 3100 |
| 2 | ಶುಲ್ಕ ಮತ್ತು ದಂಡ | 606 | 662 | 845 | 1313 |
| 3 | ಇತರೆ ಆದಾಯಗಳು | 446 | 635 | 645 | 1099 |
| 4 | ಬಿಬಿಎಂಪಿ ಆಸ್ತಿಯಿಂದ ಸ್ವೀಕೃತಿ | 26 | 18 | 21 | 91 |
| 5 | ಜಾಹೀರಾತು ತೆರಿಗೆಗಳು | 3 | 28 | 27 | 90 |
| 6 | ಒಟ್ಟು ಸ್ವಂತ ಆದಾಯ | 2484 | 3068 | 3315 | 5693 |
| 7 | ಒಟ್ಟಾರೆ ಸ್ವೀಕೃತಿ | **5246** | **6572** | **7514** | **10129** |
| | ಸ್ವೀಕೃತಿಯಲ್ಲಿ ಸ್ವಂತ ಆದಾಯದ ಪಾಲು (ಶೇ.ವಾರು) | 47.35% | 46.68% | 44.12% | 56.20% |

***ಕೋಷ್ಟಕ – 1: ಬಿಬಿಎಂಪಿಯ ಒಟ್ಟು ಸ್ವಂತ ಆದಾಯಗಳು***

ಬಿಬಿಎಂಪಿಯ 2018–19ರ ಸಾಲಿನ ಬಜೆಟ್ 10129 ಕೋಟಿ ರೂಪಾಯಿಗಳಷ್ಟು ಅಂದಾಜಿಸಲಾಗಿದ್ದು 2017–18ರ ಸಾಲಿನ ಪರಿಷ್ಕೃತ ಅಂದಾಜಿಗಿಂತ (7513 ಕೋಟಿ ರೂಪಾಯಿಗಳು) ಶೇ.35ರಷ್ಟು ಹೆಚ್ಚಿದೆ. ಸಮಯ–ಸರಣಿ ದತ್ತಾಂಶವು ತೋರಿಸುವುದೇನೆಂದರೆ ಒಟ್ಟಾರೆ ಆದಾಯದಲ್ಲಿ ಸ್ವಂತ ಆದಾಯದ ಶೇಕಡಾವಾರು ಅಂದರೆ 2019ರ ಸಾಲಿನ ಬಜೆಟ್ ಅಂದಾಜಿನಲ್ಲಿ, ಒಟ್ಟಾರೆ ಆದಾಯದಲ್ಲಿ ಸ್ವಂತ ಆದಾಯವು ಶೇ.44ರಿಂದ (2018ನೇ ಸಾಲಿನ ಬಜೆಟ್) ಶೇ. 56ಕ್ಕೆ (2019ನೇ ಸಾಲಿನ ಬಜೆಟ್) ಏರಿಕೆಯಾಗಲಿದೆ.

2019ನೇ ಸಾಲಿನ ಅಂದಾಜಿನ ಪ್ರಕಾರ ಬಿಬಿಎಂಪಿಯ ಖರ್ಚು ಶೇ. 95ರಷ್ಟು ಅಂದರೆ 5198 ಕೋಟಿ ರೂಪಾಯಿ(2015ನೇ ಸಾಲು) ಗಳಿಂದ 10104 ಕೋಟಿ ರೂಪಾಯಿಗಳಿಗೆ (2019ನೇ ಸಾಲು) ಏರಿಕೆಯಾಗಿದೆ.

ಬೆಂಗಳೂರಿನ ಜನಸಂಖ್ಯೆಯು ಶೇ. 29ರಷ್ಟು ಅಂದರೆ 0.9 ಕೋಟಿಯಿಂದ (2011) 1.24 ಕೋಟಿಗೆ (2018) ಏರಿದೆ. ಅವಶ್ಯಕತೆಗಳು ವಾರ್ಡ್‌ನಿಂದ ವಾರ್ಡ್‌ಗೆ ಗಮನಾರ್ಹವಾಗಿ ಬದಲಾಗುತ್ತದೆ ಮತ್ತು ವಾರ್ಡ್‌ಗಳ ಈ ಅವಶ್ಯಕತೆಗಳನ್ನು ವಿಕೇಂದ್ರೀಕೃತ ಮಾದರಿಯಲ್ಲಿ ಪೂರೈಸುವುದು ಈಗಿನ ತುರ್ತು ಅಗತ್ಯವಾಗಿದೆ. ಕ್ಷೇತ್ರ ತಜ್ಞರು ಮತ್ತು ಸಿವಿಕ್ ನಾಯಕರ

ಜೊತೆ ಚರ್ಚಿಸಿದ ನಂತರ ಬಿ.ಪ್ಯಾಕ್ 2019–20ನೇ ಸಾಲಿನ ಬಜೆಟ್ ತಯಾರಿಗೆ **ಈ ಕೆಳಗಿನ ಅಂಶಗಳನ್ನು ಪರಿಗಣಿಸಲು ಪ್ರಸ್ತಾವನೆ ಸಲ್ಲಿಸುತ್ತಿದೆ.**

## 1. ರಸ್ತೆ ಸಂಬಂಧಿತ ಮೂಲಭೂತ ಸೌಕರ್ಯ

20 ರಿಂದ 40 ಅಡಿ ಅಗಲದ ವಾಸಸ್ಥಳ ರಸ್ತೆಗಳಿಗೆ ತಜ್ಞರು ತಯಾರಿಸಿರುವ ಏಕಪ್ರಕಾರ ವಿನ್ಯಾಸದ ನಿರ್ದಿಷ್ಟತೆ (ಐಆರ್‌ಸಿ ಮಾನ್ಯತೆಗಳಿಗೆ ಅನುಗುಣವಾಗಿ)

## 2. ಕೆರೆಗಳು ಮತ್ತು ನಗರ ಅರಣ್ಯ ಮತ್ತು ಪ್ರಕೃತಿ ನಿರ್ವಹಣೆ

- **ನಿರ್ವಹಣಾ ನಿಧಿ**
  1. ಕೆರೆಗಳು ಮತ್ತು ನಗರ ಅರಣ್ಯ ಮತ್ತು ಪ್ರಕೃತಿ ನಿರ್ವಹಣೆ ಇಲಾಖೆಯ ಅಡಿಯಲ್ಲಿ ಬಿಬಿಎಂಪಿಯು ನಿರ್ವಹಣಾ ನಿಧಿಯನ್ನು ಸ್ಥಾಪಿಸಿ ಕೆರೆ, ಉದ್ಯಾನವನ ಮತ್ತು ಆಟದ ಮೈದಾನಗಳ ನಿರ್ವಹಣೆಗೆ ನಿಧಿಯನ್ನು ಉಪಯೋಗಿಸುವುದು
  2. ಈ ನಿರ್ವಹಣಾ ನಿಧಿಯು ಸಂಚಿತ ನಿಧಿಯಾಗಿದ್ದು ಕೆರೆ, ಉದ್ಯಾನವನ ಮತ್ತು ಆಟದ ಮೈದಾನಗಳ ನಿರ್ವಹಣೆಗೆ ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ಸಿಎಸ್‌ಆರ್‌ನಿಂದ ಕೊಡುಗೆಗಳನ್ನು ಸ್ವೀಕರಿಸಬಹುದು
  3. ಈ ನಿರ್ವಹಣೆಯನ್ನು ನಿಯಮಿತ ಕಾಲಾಂತರದಲ್ಲಿ ಮಾಡಬೇಕು ಮತ್ತು ಕಡ್ಡಾಯವಾಗಿ ಬಿಬಿಎಂಪಿಯ ಸಂಚಿತ ನಿಧಿಯಿಂದಲೇ ಜಾರಿಗೆ ತರಬೇಕು

- **ಮರ ನೆಡುತೋಪು**
  1. ಈಗಾಗಲೇ ಸಂಯೋಜಿಸಲಾಗಿರುವ ಮರ ಸಮಿತಿಯನ್ನು ಸಶಕ್ತಗೊಳಿಸಬೇಕು ಮತ್ತು ನೆಡುತೋಪು ಅಭಿಯಾನವನ್ನು ಹೇಗೆ ನಡೆಸಬೇಕೆಂಬುದರ ಕುರಿತು ಸ್ಪಷ್ಟತೆ ನೀಡಬೇಕು. ಮರ ಸಮಿತಿಯು ಅಸ್ತಿತ್ವದಲ್ಲಿರುವ ಮರಗಳ ಜಾತಿಗಳ ಕುರಿತು ವಿವರವಾದ ಅಧ್ಯಯನವನ್ನು ಕೈಗೊಳ್ಳಬೇಕು ಮತ್ತು ನಗರದಲ್ಲಿ ಗಿಡಗಳನ್ನು ನೆಡುವುದು ಮತ್ತು ನಿರ್ವಹಿಸುವುದರ ಕುರಿತು ಕಾರ್ಯನಕ್ಷೆಯನ್ನು ತಯಾರಿಸಬೇಕು.

- **ವಾಯು ಗುಣಮಟ್ಟ ಮೇಲ್ವಿಚಾರಣೆ ಸೆನ್ಸರ್‌ಗಳು**
  1. ತೀವ್ರ ದಟ್ಟಣೆಯ ಟ್ರಾಫಿಕ್ ಜಾಗಗಳಲ್ಲಿ ವಾಯು ಗುಣಮಟ್ಟ ಮೇಲ್ವಿಚಾರಣೆ ಸೆನ್ಸರ್‌ಗಳನ್ನು ಸ್ಥಾಪಿಸುವುದು ಮತ್ತು ನಿಯಮಿತ ಕಾಲಾಂತರದಲ್ಲಿ PM 2.5 and PM 10 ಹಂತಗಳ ನಿಗಾವಹಿಸುವುದು.
  2. ತದನಂತರ, ಸೆನ್ಸರ್‌ಗಳಿಂದ ಪಡೆದ ದತ್ತಾಂಶವನ್ನು ಸಾರ್ವಜನಿಕರಿಗೆ ಸಿಗುವಂತೆ ಮಾಡುವುದು ಮತ್ತು
  3. ಈ ರೀತಿಯ ಸಂಚಾರ ದಟ್ಟಣೆಯ ಪ್ರದೇಶಗಳಲ್ಲಿನ ಮಾಲಿನ್ಯ ಮಟ್ಟವನ್ನು ತಗ್ಗಿಸಲು ಯೋಜನೆಯೊಂದನ್ನು ರೂಪಿಸಲು ಎಲ್ಲಾ ಪಾಲುದಾರರನ್ನೂ ಒಳಗೊಂಡ ಜಂಟಿ ಸಹಯೋಗ ಸಮಿತಿಯನ್ನು ರಚಿಸಬೇಕು.

## 3. ಸಾರ್ವಜನಿಕ ಸೌಕರ್ಯಗಳು

- ಮಾರುಕಟ್ಟೆ ಮತ್ತು ಇತರೆ ಸಂಚಾರ ದಟ್ಟಣೆ ಪ್ರದೇಶಗಳಲ್ಲಿ ಮಹಿಳೆಯರಿಗೆ ವಿಶ್ರಾಂತಿ ಕೋಣೆಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದನ್ನು ಬಿಬಿಎಂಪಿ ಸುಗಮಗೊಳಿಸಬೇಕು. ಈ ರೀತಿಯ ವಿಶ್ರಾಂತಿ

ಕೋಣೆಗಳು ತುರ್ತು ವೈದ್ಯಕೀಯ ಅಗತ್ಯಗಳು ಮತ್ತು ಮುಟ್ಟಿನ ಆರೈಕೆಗಳು ಹಾಗೂ ವಿಶ್ರಾಂತಿಗೆ ಅಗತ್ಯವಿರುವ ಸಕಲ ಸೌಲಭ್ಯಗಳನ್ನು ಒಳಗೊಂಡಿರಬೇಕು.

- ***ಪಾರ್ಕಿಂಗ್ ಪ್ರದೇಶಗಳು***
  1. ನಗರದ ಪ್ರಮುಖ ರಸ್ತೆಗಳಲ್ಲಿ ಕೆಲವು ಪಾರ್ಕಿಂಗ್ ಪ್ರದೇಶಗಳನ್ನು ಗುರುತಿಸಬೇಕು ಮತ್ತು ಪಾವತಿಸಿ ಮತ್ತು ಪಾರ್ಕ್ (ಪೇ ಅಂಡ್ ಪಾರ್ಕ್) ಮಾಡಿ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

- ***ಬಸ್ ನಿಲ್ದಾಣಗಳು***
  1. ಬಿಬಿಎಂಪಿಯು ತಜ್ಞರ ಜೊತೆ ಸಮಾಲೋಚಿಸಿ ಸಿಸಿಟಿವಿ ಕೆಮೆರಾಗಳು, ಪ್ರಯಾಣಿಕರ ಮಾಹಿತಿ ವ್ಯವಸ್ಥೆ (Passenger Information System) ಮತ್ತು ಪ್ರಯಾಣಿಕಗೆ ಸಹಾಯ ಮಾಡಲು ಸುರಕ್ಷತಾ ಅಲಾರಾಮ್‌ಗಳ ಅಳವಡಿಕೆಯಂತಹ ಸೌಲಭ್ಯಗಳಿರುವ ಪ್ರಮಾಣೀಕೃತ ವಿನ್ಯಾಸವನ್ನು ರೂಪಿಸಬೇಕು.
  2. ನಗರದ ಹಲವು ಪ್ರದೇಶಗಳಲ್ಲಿ ಜಂಕ್ಷನ್‌ಗಳು/ ಇಂಟರ್‌ಸೆಕ್ಷನ್‌ಗಳಿಗೆ ಹೊಂದಿಕೊಂಡಂತೆ ಇರುವ ಬಸ್ ನಿಲ್ದಾಣಗಳು ಟ್ರಾಫಿಕ್ ಗ್ರಿಡ್‌ಲಾಕ್‌ಗೆ ಕಾರಣವಾಗುತ್ತಿವೆ. ಪ್ರಯಾಣಿಕರ ಸುರಕ್ಷತೆ ಮತ್ತು ದಟ್ಟಣೆಯನ್ನು ತಡೆಯುವ ನಿಟ್ಟಿನಲ್ಲಿ ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸಲು ಅಧ್ಯಯನವೊಂದನ್ನು ಕೈಗೊಳ್ಳಬೇಕು.

## 4. ಘನ ತ್ಯಾಜ್ಯ ನಿರ್ವಹಣೆ

- **ಬೇರ್ಪಡಿಸುವಿಕೆ ಮತ್ತು ಸಂಗ್ರಹಣೆ**
  1. ನಗರದ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳಿಂದ ಕಸವನ್ನು ಸಂಗ್ರಹಿಸಲು ವ್ಯಾಕ್ಯೂಮ್ ಲಿಟ್ಟರ್‌ನಂತಹ ಸುಸಜ್ಜಿತ ಪರಿಕರಗಳನ್ನು ಅಳವಡಿಸುವುದು
  2. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ಕಸವನ್ನು ನೇರವಾಗಿ ವರ್ಗಾಯಿಸಲು ವೈಜ್ಞಾನಿಕ ವರ್ಗಾವಣೆ ಸ್ಥಳಗಳನ್ನು ಸ್ಥಾಪಿಸುವುದು
  3. ನಗರದಲ್ಲಿ ಪ್ರತಿದಿನ ಅಂದಾಜು 3500 ಟನ್‌ಗಳಷ್ಟು ಕಟ್ಟಡ ನಿರ್ಮಾಣ ಮತ್ತು ಧ್ವಂಸ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ರೀತಿಯ ತ್ಯಾಜ್ಯವನ್ನು ಸಂಗ್ರಹಿಸಲು ಪ್ರದೇಶವೊಂದರಲ್ಲಿ ತ್ಯಾಜ್ಯ ಉತ್ಪಾದನೆಯ ಪ್ರಮಾಣದ ಆಧಾರದ ಮೇಲೆ ಪ್ರತಿ ವಿಧಾನಸಭಾ ಕ್ಷೇತ್ರ ಅಥವಾ ವಾರ್ಡ್ ಮಟ್ಟದಲ್ಲಿ ಸಂಗ್ರಹಣಾ ಕೇಂದ್ರವನ್ನು ಪ್ರಾರಂಭಿಸಬೇಕು
- ರಸ್ತೆಗಳು ಮತ್ತು ಫುಟ್‌ಪಾತ್‌ಗಳ ಮೇಲೆ ವಾರಸುದಾರರಿಲ್ಲದೆ ತೊರೆಯಲಾದ ವಾಹನಗಳು ಟ್ರಾಫಿಕ್ ತೊಂದರೆಯು ಮತ್ತಷ್ಟು ಉಲ್ಬಣಗೊಳ್ಳುವಂತೆ ಮಾಡುತ್ತಿವೆ. ಬಿಬಿಎಂಪಿಯು ಈ ರೀತಿಯ ವಾಹನಗಳನ್ನು ವಾರ್ಡ್ ಮಟ್ಟದಲ್ಲಿ ಗುರುತಿಸಿ ಟ್ರಾಫಿಕ್ ಪೊಲೀಸರ ಸಹಯೋಗದಲ್ಲಿ ಕ್ರಮವನ್ನನುಸರಿಸಿ ಸೂಕ್ತವಾಗಿ ವಿಲೇವಾರಿ ಮಾಡಬೇಕು.
- ಧಾರ್ಮಿಕ ಸ್ಥಳಗಳು, ಪಾರ್ಕ್/ ಬೀದಿಗಳು ಮತ್ತು ಇತರೆ ಸಾಮಾನ್ಯ ಪ್ರದೇಶಗಳಿಂದ ಸಂಗ್ರಹಿಸಿದ ಕಸವನ್ನು ಸಂಸ್ಕರಿಸಬಲ್ಲಂತಹ ವಿಕೇಂದ್ರೀಕೃತ ತ್ಯಾಜ್ಯ ಘಟಕಗಳಿಗೆ ವಾರ್ಡ್ ಮಟ್ಟದಲ್ಲಿ ಸ್ಥಳಾವಕಾಶ ನೀಡಬೇಕು
- ಪ್ರತಿ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರು ಸ್ಟೀಲ್ ತಟ್ಟೆಗಳು, ಬಟ್ಟಲುಗಳು ಮತ್ತು ಲೋಟಗಳನ್ನು ಬಾಡಿಗೆ ಪಡೆಯಲು ಅನುಕೂಲವಾಗುವಂತೆ ಬಿಬಿಎಂಪಿಯು ಪ್ಲೇಟ್ ಬ್ಯಾಂಕನ್ನು ಸ್ಥಾಪಿಸಬೇಕು. ಈ ಉಪಕ್ರಮವು ಪ್ಲಾಸ್ಟಿಕ್ ವಿರೋಧಿ ಮತ್ತು ಕಸವಿರೋಧಿಯಾಗಿದೆ.

## 5. ಆರೋಗ್ಯ, ಶಿಕ್ಷಣ ಮತ್ತು ಯೋಗಕ್ಷೇಮ

- ***ಆರೋಗ್ಯ***
  1. ಬಿಬಿಎಂಪಿಯು ವಾರ್ಷಿಕವಾಗಿ ವಾರ್ಡ್ ಮಟ್ಟದಲ್ಲಿ ಆರೋಗ್ಯ ಮೌಲ್ಯಮಾಪನ ಸಮೀಕ್ಷೆ ನಡೆಸಬೇಕು
  2. ಈ ಮಾಹಿತಿಯನ್ನು ಕ್ರೋಢೀಕರಿಸಬೇಕು ಮತ್ತು ವಿಶ್ಲೇಷಿಸಿ ಪ್ರತಿ ವಾರ್ಡ್‌ಗೆ ಸ್ವಾಸ್ಥ್ಯ ನಕ್ಷೆಯನ್ನು ತಯಾರಿಸಬೇಕು.

- ***ಶಿಕ್ಷಣ***
  1. ಬಿಬಿಎಂಪಿ ಶಾಲೆಗಳ ಮೇಲ್ವಿಚಾರಣೆ ಮಾಡಲು ಸಬಲೀಕರಣ ಸಮಿತಿಯೊಂದನ್ನು ರಚಿಸಿ ಅದಕ್ಕೆ ಸಾಧಿಸಲು ಗುರಿಗಳನ್ನು ನೀಡಬೇಕು.

## 6. ಎಸ್ಟೇಟ್‌ಗಳು

- ***ಬಿಬಿಎಂಪಿ ಖಾಲಿ ಜಾಗಗಳು***
  1. ಬಿಬಿಎಂಪಿಯು ತನ್ನ ಎಲ್ಲಾ ಖಾಲಿ ಜಾಗಗಳ ಬಗ್ಗೆ ಕೋಶ (repository)ಯನ್ನು ರಚಿಸಬೇಕು ಮತ್ತು ಆ ಮಾಹಿತಿಯು ಸಾರ್ವಜನಿಕ ಡೊಮೈನ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕು
  2. ಇದರ ಮುಂದುವರೆದ ಭಾಗವಾಗಿ, ಈ ಖಾಲಿ ಜಾಗಗಳನ್ನು ನಾಗರಿಕ ಕೇಂದ್ರಿತ ಚಟುವಟಿಕೆಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಬಳಸಬಹುದಾಗಿದೆ.

- ***ಬಿಬಿಎಂಪಿ ವಾಣಿಜ್ಯ ಸಂಕೀರ್ಣಗಳು***
  1. ಬಿಬಿಎಂಪಿ ತರ್ಕಬದ್ಧ ಹಣಕಾಸು ನಿರ್ವಹಣೆಗಾಗಿ ತನ್ನ ಸ್ವಂತ ಆದಾಯ ವೃದ್ಧಿಸಿಕೊಳ್ಳಲು ಖಾಲಿ ಇರುವ ಮತ್ತು ಈಗಾಗಲೇ ಬೇರೆಯವರ ಸ್ವಾಧೀನಕ್ಕೆ ನೀಡಲಾದ ವಾಣಿಜ್ಯ ಸಂಕೀರ್ಣಗಳಿಗೆ ಪ್ರಸ್ತುತ ಮಾರುಕಟ್ಟೆ ದರ ನಿಗದಿಗೊಳಿಸಬೇಕು.
  2. ಬಿಬಿಎಂಪಿಯ ಎಲ್ಲಾ ವಾಣಿಜ್ಯ ಸಂಕೀರ್ಣಗಳಲ್ಲಿ ಜವಾಬ್ದಾರಿಯುತ ತ್ಯಾಜ್ಯ ನಿರ್ವಹಣೆ ಮಾಡಬೇಕು.

## 7. ಆದಾಯ

- ***ಆಸ್ತಿ ತೆರಿಗೆ***
  1. 2017–18ರ ಸಾಲಿನ ಪರಿಷ್ಕೃತ ಅಂದಾಜಿನಂತೆ, ಒಟ್ಟು ಆದಾಯದಲ್ಲಿ ಆಸ್ತಿ ತೆರಿಗೆಯ ಪಾಲು ಶೇ. 24ರಷ್ಟು. ವಲಯ ಮಟ್ಟದಲ್ಲಿ ಸಂಗ್ರಹಿಸಲಾಗುವ ಆಸ್ತಿ ತೆರಿಗೆ ಮೊತ್ತದಲ್ಲಿ ದೊಡ್ಡಮಟ್ಟದ ವ್ಯತ್ಯಾಸಗಳಿವೆ.
  2. ವಾರ್ಷಿಕವಾಗಿ ಸಂಗ್ರಹಿಸಲಾಗುವ ಒಟ್ಟು ಆಸ್ತಿ ತೆರಿಗೆ ಮತ್ತು ಪ್ರತಿ ವಾರ್ಡ್‌ಗೆ ಈ ಮೊತ್ತವನ್ನು ಹೇಗೆ ಬಳಕೆ ಮಾಡಲಾಗಿದೆ ಎಂಬ ವಿವರಗಳು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಲಭ್ಯವಾಗಬೇಕು.
  3. ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ತೆರಿಗೆ ವಂಚನೆ ಮಾಡಿರುವವರ ಮಾಹಿತಿಯನ್ನು ಕೇಂದ್ರಗಳಲ್ಲಿ ಅಥವಾ ಯಾವುದಾದರೊಂದು ಸಾರ್ವಜನಿಕ ವೇದಿಕೆಯಲ್ಲಿ ಪ್ರಕಟಿಸಬೇಕು.

- ಜಾಹೀರಾತು ಮತ್ತು ಪ್ರಚಾರ ಸಾಮಗ್ರಿಗಳ ಮೇಲಿನ ತೆರಿಗೆಯನ್ನು ಪರಿಷ್ಕರಿಸಬೇಕು. ಅಕ್ರಮ ಹೋರ್ಡಿಂಗ್‌ಗಳಿಗೆ ಸಾಮಾನ್ಯ ತೆರಿಗೆಗಿಂತ 3 ಪಟ್ಟು ಹೆಚ್ಚು ದಂಡ ವಿಧಿಸಬೇಕು. ಖಾಸಗಿ ಆಸ್ತಿಯಲ್ಲಿದ್ದು ರಸ್ತೆಯಿಂದ ನೋಡಬಲ್ಲಂತಹ ಹೋರ್ಡಿಂಗ್‌ಗಳಿಗೆ ತೆರಿಗೆ ವಿಧಿಸಬೇಕು.
- ನಗರಪ್ರದೇಶದಲ್ಲಿರುವ ಕೊಳವೆಬಾವಿಗಳಿಂದ ನೀರನ್ನು ತೆಗೆದು ಮಾರುವುದಕ್ಕೆ ತೆರಿಗೆಯನ್ನು ವಿಧಿಸಬೇಕು. ಈ ತೆರಿಗೆ ಹಣವನ್ನು ಸಾರ್ವಜನಿಕರಿಗೆ ನೀರು ಪೂರೈಕೆ ವೃದ್ಧಿಸುವ ಯೋಜನೆಗೆ ಬಳಸಬೇಕು
- ಪಾರ್ಕಿಂಗ್ ಶುಲ್ಕ, ಕೇಬಲ್ ಶುಲ್ಕ, ಹೋರ್ಡಿಂಗ್ ಆದಾಯದ ಶೇ. 50ರಷ್ಟನ್ನು ಆಯಾ ವಾರ್ಡ್‌ಗಳು ಮತ್ತು ವಲಯಗಳ ಅಭಿವೃದ್ಧಿಗೆ ಮೀಸಲಿಡಬೇಕು.

## 8. ಸಾಮಾನ್ಯ

- ಬಿಬಿಎಂಪಿಯು ತನ್ನ ವೆಬ್‌ಸೈಟ್ ನಿರ್ವಹಣೆಗೆ ಮತ್ತು ವಾರ್ಡ್ ಮಟ್ಟದಲ್ಲಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಕೆಲಸಗಳ ಮಾಹಿತಿಯನ್ನು ಅಪ್ಡೇಟ್ ಮಾಡಲು ಪ್ರತಿ ಆರ್ಥಿಕ ವರ್ಷದಲ್ಲಿ ನಿಗದಿತ ಮೊತ್ತವನ್ನು ಮೀಸಲಿಡಬೇಕು.
- ಜಾಬ್‌ಕೋಡ್‌ಗಳು, ಕಾರ್ಯಾದೇಶಗಳು, ಪಾವತಿ ಸ್ಥಿತಿಗತಿಯಂತಹ ಮಾಹಿತಿಯನ್ನು ನೀಡುವ ಕೋರಿ (repository)ಯಂತೆ ಕಾರ್ಯನಿರ್ವಹಿಸಬಲ್ಲ ಇ–ಗ್ರಂಥಾಲಯವನ್ನು ಬಿಬಿಎಂಪಿ ಸ್ಥಾಪಿಸಬೇಕು.
- 2018–19ನೇ ಸಾಲಿನ ಬಜೆಟ್‌ನಲ್ಲಿ ಅನುಮೋದನೆಗೊಂಡ ಎಲ್ಲಾ ಮೂಲಭೂತ ಸೌಕರ್ಯ ಯೋಜನೆಗಳ ನಿಯಮಿತ ಅಪ್ಡೇಟ್‌ಗಳನ್ನು ನೀಡುವ ಸಂವಾದಾತ್ಮಕ (interactive) ವೇದಿಕೆಯೊಂದನ್ನು ಬಿಬಿಎಂಪಿ ರೂಪಿಸಬೇಕು.
- ಸಂಸ್ಥೆಗಳು/ ಕಾರ್ಪೊರೇಟ್‌ಗಳು ತಮ್ಮ CSR ಬೆಂಬಲಿತ/RWAಗಳ ಅಡಿಯಲ್ಲಿ ಕೈಗೊಳ್ಳುವ ನಾಗರಿಕ ಸೌಲಭ್ಯ ಯೋಜನೆಗಳ ಜಾರಿಗೆ ಅಗತ್ಯವಿರುವ ಅನುಮತಿಗಳನ್ನು ನೀಡಲು ಸಹಾಯವಾಗುವಂತೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಆಯುಕ್ತರ ಅಡಿಯಲ್ಲಿ ಏಕಬಿಂದು ಸಂಪರ್ಕ ಕೋಶವೊಂದನ್ನು ಸ್ಥಾಪಿಸಬೇಕು. ಈ ಕೋಶವು ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸಕಾಲಿಕವಾಗಿ (15 ದಿನಗಳು) ಪ್ರಸ್ತಾವನೆಗಳಿಗೆ ಅನುಮೋದನೆ ನೀಡಬೇಕು.
- ವಾರ್ಡ್‌ನಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳುವ ಮುನ್ನ ಬಿಬಿಎಂಪಿಯು ನಾಗರಿಕರ ಜೊತೆ ಸಮಾಲೋಚನಾ ಸಭೆಗಳನ್ನು ನಡೆಸಬೇಕು. ಈ ಸಮಾಲೋಚನಾ ಸಭೆಗಳ ಕುರಿತಂತೆ ನೋಟೀಸನ್ನು ವಾರ್ಡ್ ಕಚೇರಿಗಳಲ್ಲಿ ಮತ್ತು ಬಿಬಿಎಂಪಿ ವೆಬ್‌ಸೈಟಿನಲ್ಲಿ ಪ್ರಕಟಿಸಬೇಕು.